# ಆಹಾ ಸುದ್ದಿ!

★ ಸಸಿತೋಟ

ಅಮೆರಿಕದ ವಾಷಿಂಗ್ಟನ್ ಸ್ಟೇಟ್‌ನಲ್ಲಿ ಮಾದಕ ದ್ರವ್ಯ ಗಾಂಜಾ ಬಳಕೆಯನ್ನು ಕಾನೂನುಬದ್ಧಗೊಳಿಸಲಾಗಿದೆ. ಹೆಚ್ಚುವರಿ ಎಲೆಗಳನ್ನು ಏನು ಮಾಡುವುದು ಎಂಬ ಗಾಂಜಾ ಬೆಳೆಗಾರರ ಸಮಸ್ಯೆಗೆ ಈಗಾಗಲೇ ಉತ್ತರ ಸಿಕ್ಕಿಬಿಟ್ಟಿದೆ. ಹಂದಿಗಳಿಗೆ ಈ ಎಲೆಗಳನ್ನು ತಿನ್ನಿಸಿದರೆ ಕೊಬ್ಬಿ ಬೆಳೆಯುತ್ತವಂತೆ. ಜೊತೆಗೆ ಮಾಂಸ ಹೆಚ್ಚು ರುಚಿಕರವಂತೆ. ಈಗ ಅಲ್ಲಿಯ ಹೋಟೆಲ್‌ಗಳಲ್ಲಿ 'ಗಾಂಜಾ ಹಂದಿ, ಗಾಂಜಾ ಕೋಳಿ' ಎಂದೆಲ್ಲ ಮೆನುವಿನಲ್ಲಿ ಸೇರಿಸಿದ್ದು, ಮುಂದೆ ದಪ್ಪಗಿದ್ದವರಿಗೆ 'ಗಾಂಜಾ ಮನುಷ್ಯ' ಎಂದು ಹೆಸರಿಡಬಹುದು!



ಹಾಂಕಾಂಗ್‌ನ ದ್ವೀಪ್ ಚೆವುಂಗ್ ಚಾವುನಲ್ಲಿ ವಾರ್ಷಿಕವಾಗಿ ನಡೆಯುವ ಬನ್‌ಗಳ ಹಬ್ಬ. ನಕಲಿ ಬನ್‌ಗಳ ಗೋಪುರ ನಿರ್ಮಿಸಿ ಬನ್ ಹರಿಯುವ ಸ್ಪರ್ಧೆ ಹಬ್ಬದ ವಿಶೇಷ. ಇದರಿಂದ ಪ್ಲೇಗಮ್ಮನ ಮುನಿಸು ಕಡಿಮೆಯಾಗುತ್ತದಂತೆ. ಬೆಂಗಳೂರಿನಲ್ಲಿ ಮಾತ್ರ ಪ್ಲೇಗಮ್ಮ ಎಂದು ಮೂಗು ಮುರಿಯುವ ಹೈಟೆಕ್ ಮಂದಿ ಹಾಂಕಾಂಗ್‌ನತ್ತ ಮುಖ ಮಾಡಿದರೆ.. ಅಲ್ಲಿಯೂ ಪ್ಲೇಗಮ್ಮನ ಮುಖ ದರ್ಶನವೇ.



ಸೆರ್ಬಿಯಾದ ಡ್ರಿನಾ ನದಿಯ ನಡುವಿನ ಬಂಡೆಯ ಮೇಲೆ 1968ರಲ್ಲೇ ಕಟ್ಟಿದ ಪುಟ್ಟ ಮನೆಯಿದು. ಮನೆ ಹೊಂದಲು ಪ್ರಶಸ್ತ ಸ್ಥಳ ಎಂದು ನಾಲ್ಕೈದು ಮಂದಿ ಯುವಕರ ಗುಂಪಿಗೆ ಅಲೋಚನೆ ಬಂದು ಕಟ್ಟಿದ್ದಂತೆ. ನೆಲದಲ್ಲಿ ನೆಲೆ ಸಿಗದಿದ್ದರೆ, ಅಲೆಯ ಮೇಲೆ ತೇಲಿಸೋ ಇಲ್ಲ ಮುಳುಗಿಸೋ ಎಂದು ಸಾಗುವುದೇ ಲೇಸು!

ಜಪಾನಿನಲ್ಲಿ ಬಿಡುಗಡೆಯಾದ ಹೊಸ ಕಂಚುಕ 'ಬ್ರಾನೋಮಿಕ್ಸ್'. ಹಣದುಬ್ಬರ ಕುರಿತಂತೆ ಜಪಾನಿನ ಪ್ರಧಾನಿ ಶಿಂಝೊ ಅಬೆ ಮಂಡಿಸಿರುವ 'ಅಬೆನೊಮಿಕ್ಸ್' ಅರ್ಥಶಾಸ್ತ್ರದ ಸೂತ್ರಗಳ ಅನ್ವಯ ಸೈಜು ಕಡಿಮೆಯಿದ್ದರೂ ಶೇ. 2ರಷ್ಟು ಹೆಚ್ಚುವರಿ ಸೈಜಿರುವಂತೆ ಗೋಚರಿಸುತ್ತದಂತೆ. ಹಣದುಬ್ಬರ ಸೂಚಿಸುವ ಬಾಣದ ಗುರುತು ಬೇರೆ. ಆದರೆ ಒಳ ಉಡುಪಿಗೆ ಎಷ್ಟೆಲ್ಲಾ ಸಿಂಗಾರ ಮಾಡಿದರೂ ಅಂತರಾಳದ ಸತ್ಯ ಗೊತ್ತಾದಾಗ ಸರ್ಕಾರ ಬಿಂಬಿಸುವ ಎಕನಾಮಿಕ್ಸ್‌ನಂತೆ ಠುಸ್ಸೆನ್ನುವುದೇ ಜಾಸ್ತಿ.




ಝೆಕ್ ಗಣರಾಜ್ಯದ ರಾಜಧಾನಿ ಪ್ರೇಗ್‌ನಲ್ಲಿ ಇನ್ನು ಮುಂದೆ 'ಲವ್ ಟ್ರೇನ್'ಗಳು ಚಲಿಸಲಿವೆ. ಸಂಗಾತಿ ಹುಡುಕಾಟದಲ್ಲಿರುವ ಒಂಟಿಜೀವಿಗಳಿಗೆಂದೇ ಈ ರೈಲುಗಳಲ್ಲಿ ವಿಶೇಷ ಡಬ್ಬಿಗಳಿರುತ್ತವಂತೆ. ಅಲ್ಲಿ ಪಯಣಿಸುವಾಗ ಸೂಕ್ತ ಸಂಗಾತಿ ಸಿಕ್ಕಿ ಜಂಟಿಯಾಗಬಹುದು ಎಂಬುದು ಅಲ್ಲಿಯ ರೈಲ್ವೆ ಇಲಾಖೆಯ ಘೋಷಣೆ. ಆದರೆ ರಸ್ತೆಗಳಲ್ಲಾಗುತ್ತಿರುವ ಟ್ರಾಫಿಕ್ ಜ್ಯಾಮ್ ತಡೆಯಲು ಈ ತಂತ್ರವಂತೆ. ಬೆಂಗಳೂರು ಮೆಟ್ರೊ ಕೇಳಿಸಿಕೊಂಡಿದೆಯೇ ಈ ಘೋಷಣೆಯನ್ನು!

ನ್ಯೂಯಾರ್ಕ್‌ನ ನವ್ಯಕಲೆಯ ವಸ್ತುಸಂಗ್ರಹಾಲಯದಲ್ಲಿರುವ ಮಳೆ ಕೊಠಡಿ. 5000 ಚ. ಅಡಿ ಜಾಗದಲ್ಲಿ ನೀವು ಚಲಿಸುವಾಗ ಸುತ್ತ ಮಳೆ ಬಿದ್ದರೂ ತಲೆಯ ಮೇಲೆ ಮಾತ್ರ ನೀರು ಬೀಳದಂತಹ ತಂತ್ರಜ್ಞಾನ ಅಲ್ಲಿದೆಯಂತೆ. ಭ್ರಷ್ಟಾಚಾರದಲ್ಲೇ ಮುಳುಗಿದವರೂ ತಮ್ಮ ಸರ್ಕಾರ ಬಂದ ಕೂಡಲೇ ಒಂಚೂರು ಅಂಟಿಸಿಕೊಳ್ಳದೇ ಶುದ್ಧರಾಗಿ ಹೊರಬಂದುಬಿಡುತ್ತಾರಲ್ಲ ಹಾಗೆ.

